# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೨೯, ಜನವರಿ, ೨೦೨೬(ಮಾಘ, ೦೯, ಶಕವರ್ಷ, ೧೯೪೭)<br>BENGALURU, THURSDAY, 29, JANUARY, 2026(MAGHA, 09, SHAKAVARSHA, 1947) | ನಂ. ೧೦೭<br>No. 107 |
|---|---|---|

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ/353/ಜಿಪಸ/2023

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 29-01-2026

## ಅಧಿಸೂಚನೆ

ನಗರಾಭಿವೃದ್ಧಿ ಇಲಾಖೆಯು, ಕಲಬುರಗಿ ಜಿಲ್ಲೆಯ, ಸೇಡಂ ತಾಲ್ಲೂಕಿನ ಕೆಲವು ಗ್ರಾಮಗಳನ್ನು, ನಗರ ಸ್ಥಳೀಯ ಸಂಸ್ಥೆಗಳಿಗೆ ಸೇರ್ಪಡೆಗೊಳಿಸಿ ಆದೇಶಿಸಿರುತ್ತದೆ, ಅದರನ್ವಯ ಸದರಿ ತಾಲ್ಲೂಕಿನ ಜಿಲ್ಲಾ ಪಂಚಾಯತಿಗಳ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಗಳನ್ನು ಮರು ನಿಗದಿಪಡಿಸಬೇಕಾಗಿರುತ್ತದೆ. ಆದುದರಿಂದ ಸರ್ಕಾರವು ದಿನಾಂಕ:16-12-2023ರಂದು ಹೊರಡಿಸಿದ್ದ ಅಧಿಸೂಚನೆಯಲ್ಲಿನ, ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯಿತಿಯ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದು ದಿನಾಂಕ:06-01-2026ರಂದು ಆದೇಶಿಸಿದೆ.

ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 308-ಇ ರಡಿ ರಚಿತವಾಗಿರುವ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು, ಅಧಿನಿಯಮದ ಪ್ರಕರಣ 308-ಎಫ್ ರಡಿಯಲ್ಲಿನ ಉಪಬಂಧಗಳನುಸಾರ ಕಲಬುರಗಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಸೇಡಂ ತಾಲ್ಲೂಕಿನಿಂದ ಆಯ್ಕೆಯಾಗುವ ಜಿಲ್ಲಾ ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಹಾಗೂ ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶವನ್ನು **5** ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ, ಅವುಗಳ ಸೀಮಾ/ಗಡಿಯನ್ನು ನಿರ್ಣಯಿಸಿ, ಶಿಫಾರಸ್ಸು ವರದಿಯನ್ನು ದಿನಾಂಕ: 27.01.2026ರಂದು ಸಲ್ಲಿಸಿರುತ್ತದೆ.

ಈ ಶಿಫಾರಸ್ಸು ವರದಿಯನ್ನು ಸರ್ಕಾರವು ಅಂಗೀಕರಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 160, 161 ಹಾಗೂ 163ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯಿತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **"ಅ"** ರಂತೆ ಹಾಗೂ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರು ಮತ್ತು ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳನ್ನು ಕೋಷ್ಟಕ **"ಆ"** ರಂತೆ ನಿಗದಿಪಡಿಸಿ ಆದೇಶಿಸಿದೆ.

**ಕೋಷ್ಟಕ "ಅ"**

| ಕಲಬುರಗಿ ಜಿಲ್ಲೆ | | |
|---|---|---|
| ಕ್ರ. ಸಂ. | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿಯ ಸದಸ್ಯರ ಸಂಖ್ಯೆ |
| 1 | 2 | 3 |
| | ಸೇಡಂ | 5 |

**ಕೋಷ್ಟಕ "ಆ"**

| ಕಲಬುರಗಿ ಜಿಲ್ಲೆ | | | |
|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 | 4 |
| 1 | ಸೇಡಂ | 33-ಮಳಖೇಡ | ಮಳಖೇಡ ಜೆ, ಮಳಖೇಡ ಕೆ, ಸಮಖೇಡ, ಕುಕ್ಕುಂದಾ, ಮೀನಹಾಬಳ, ಬೀರನಳ್ಳಿ, ತೋಟ್ನಳ್ಳಿ, ಹುಣಸನಹಳ್ಳಿ, ಬೀಜನಳ್ಳಿ, ಸಂಗಾವಿ (ಎಂ), ಅರೇಬೊಮ್ಮನಹಳ್ಳಿ,ತೇಲ್ಕೂರ, ಸಂಗಾವಿ (ಟಿ), ಲೋಹಾಡ, ಸೂರವಾರ, ಹಾಬಳ ಟಿ, ಯಡ್ಡಳ್ಳಿ, ಯಡಗಾ, ಬಿಬ್ಬಳ್ಳಿ, ಕಾಚೂರ, ತರನಳ್ಳಿ, ಮುಗನೂರ, ಸಟಪಟನಹಳ್ಳಿ, ನೀಲಹಳ್ಳಿ,ಸ ಹೊಸಳ್ಳಿ, ಕೊಂಕನಳ್ಳಿ, ನೃಪತುಂಗ ನಗರ, ರಾಜೀವ ನಗರ, ಭೀಮನಗರ. |
| 2 | ಸೇಡಂ | 34-ಆಡಕಿ | ಆಡಕಿ, ಜವಾಹಾರ ನಗರ, ಮದಕಲ್, ಇಂಜೇಪಲ್ಲಿ, ಕೊಂತನಪಲ್ಲಿ, ಸೋಮಪಲ್ಲಿ, ಜಾಕನಪಲ್ಲಿ, ರುದ್ರುವಾರ, ಮುನಕನಪಲ್ಲಿ, ಕಡಚರ್ಲಾ,ಜಿಲ್ಲೇಡಪಲ್ಲಿ, ಬೀದರಚೇಡ, ಗೋಪನಪಲ್ಲಿ (ಕೆ), ಇಮಾಡಾಪೂರ, ಮದರ ನಾಗಸನಪಲ್ಲಿ, ಕುರಕುಂಟಾ, ಹಯ್ಯಾಳ, ಮದನಾ, ಕಡತಾಲ, ಕೋನಾಪೂರ, ರಾಘಪೂರ. |
| 3 | ಸೇಡಂ | 35-ಕೋಡ್ಲಾ | ಕೋಡ್ಲಾ, ರಂಜೋಳ, ಸಿಂಧನಮಡು, ಹಣಮನಹಳ್ಳಿ, ಗೌಡನಳ್ಳಿ, ಮಾಧವಾರ, ಚಿಟಕನಪಲ್ಲಿ, ಅಮರವಾದಿ, ಹಾಳಹಣಮನಹಳ್ಳಿ, ಭೂತಪೂರ, ಗುಂಡಳ್ಳಿ ಬಿ, ಕಾಚವಾರ, ತುರ್ಕಬೊಮ್ಮನಳ್ಳಿ, ತುರನೂರ, ರಂಗವಾರ, ಊಡಗಿ, ಹಂಗನಹಳ್ಳಿ, ಕಲಕಂಭ, ಅಳ್ಳೋಳ್ಳಿ, ಬೆನಕನಳ್ಳಿ, ಮುಷ್ಠಳ್ಳಿ, ಮೈಲವಾರ, ನಾಮವಾರ. |
| 4 | ಸೇಡಂ | 36-ಮುಧೋಳ | ಮುಧೋಳ, ಕೊಂಪಲ್ಲಿ ಜೆ, ಕಾನಾಗಡ್ಡಾ, ಗಂಗಾರಾವಲಪಲ್ಲಿ, ತೋಲಮಾಮಡಿ, ಯಾನಾಗುಂದಿ, ಚಂದಾಪೂರ, ಪಾಕಾಲ, ಕಿಷ್ಟಾಪೂರ, ಮೇದಕ, ಶಿಲಾರಕೋಟ, ಗಜಲಾಪೂರ, ಶಂಕರಾಜಪೂರ, ಶಾಬಾಜಪೂರ, ನಾಡೇಪಲ್ಲಿ, ಕದ್ಲಾಪೂರ, ಬನ್ನೂರ (ಜಿ), ರಿಬ್ಬನಪಲ್ಲಿ, ಖಂಡೇರಾಯನಪಲ್ಲಿ, ಮಲ್ಲಾಬಾದ, ಅನಂತಪೂರ, ಲಿಂಗಂಪಲ್ಲಿ, ಬೊಂದೆಪಲ್ಲಿ, ಈರ್ನಾಪಲ್ಲಿ, ಗುಂಡೇಪಲ್ಲಿ (ಕೆ), ಇಂದಿರಾ ನಗರ, ರಾಜೋಳ (ಕೆ). |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಕಲಬುರಗಿ ಜಿಲ್ಲೆ | | | |
|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| **1** | **2** | **3** | **4** |
| **5** | ಸೇಡಂ | 37-ಕೋಲಕುಂದಾ | ಕೋಲಕುಂದಾ, ಮಲ್ಕಾಪಲ್ಲಿ, ಗಾಡದನ್ನಾ, ವೆಂಕಟಾಪೂರ, ದುಗನೂರ, ಹಂದರಕಿ, ಹುಳಗೋಳ, ದೇವನೂರ, ಬಿಲಕಲ, ನಾಚವಾರ, ಇಟಕಾಲ, ಬುರಗಪಲ್ಲಿ, ಮೋತಕಪಲ್ಲಿ, ಶಕಲಾಸಪಲ್ಲಿ, ಗುಂತಾತಿಪಡಂಪಲ್ಲಿ, ನರೇಡ್ಡಾಪಾಡ. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH